

# ಸೂಜಿ ಮನುಷ್ಯ!



ಪಾಟಿಯಾಲದಲ್ಲಿರುವ ಅರುಣ್ ಕುಮಾರ್ ಬಜಾಜ್ ಅವರು ಅತ್ಯದ್ಭುತ ಕಲಾವಿದರು.35 ರ ಹರೆಯದ ಇವರು ಬಟ್ಟೆಗಳ ಮೇಲೆ ಪೇಟಿಂಗ್ಸ್ ಮಾಡುತ್ತಾರೆ! ಬಣ್ಣಗಳನ್ನು ಅದ್ದಿದ ಕುಂಚದಿಂದ ಖಂಡಿತವಾಗಿ ಅಲ್ಲ! ಬದಲಾಗಿ ಬಟ್ಟೆಗಳನ್ನು ಹೊಲೆಯುವ ಹೊಲಿಗೆ ಯಂತ್ರದಿಂದ! ಇವರ ಕಲಾಕೃತಿಗಳನ್ನು ನೋಡಿದರೆ ಬಣ್ಣದಿಂದ ಮೂಡಿಸಿದ ಪೇಟಿಂಗ್ಸ್ ಎಂದು ಒಂದು ಕ್ಷಣ ಅನ್ನಿಸದೆ ಇರದು. ಇವುಗಳನ್ನೆಲ್ಲಾ ಮಾಡಿರುವುದು ಸಾಧಾರಣ ಹೊಲಿಗೆ ಯಂತ್ರದಿಂದ ಎಂದು ಗೊತ್ತಾದಾಗ ಎಂಥವರಿಗೂ ಅಚ್ಚರಿಯಾಗುವುದು ಖಂಡಿತ!

ಬಾಲ್ಯದಿಂದಲೂ ತಾನೊಬ್ಬ ಉತ್ತಮ ಚಿತ್ರಗಾರನಾಗಬೇಕೆಂಬ ಅರುಣ್ ಕುಮಾರ್ ಕನಸು ಕಾಣುತ್ತಿದ್ದರಂತೆ. ಆದರೆ 15 ವರ್ಷಗಳ ಹಿಂದೆ ಆಕಸ್ಮಿಕವಾಗಿ ತಂದೆ ತೀರಿಕೊಂಡಾಗ ಮನೆಯನ್ನು ಮುನ್ನಡೆಸುವ ಜವಾಬ್ದಾರಿ ಹೆಗಲ ಮೇಲೇರಿತು. ಆಗ ಅನಿವಾರ್ಯವಾಗಿ ಟೈಲರಿಂಗ್ ಕೆಲಸವನ್ನು ಕೈಗೊಳ್ಳಬೇಕಾಗಿ ಬಂದಿತು. ಹೊಲಿಗೆ ವೃತ್ತಿ ಕೈಗೊಂಡಿದ್ದರೂ ಇವರೊಳಗಿನ ಚಿತ್ರ ಕಲಾವಿದ ಮಾತ್ರ ನಾಶವಾಗಲಿಲ್ಲ. ದಾರ ಹಾಗೂ ಸೂಜಿಯನ್ನು ಬಳಸಿಕೊಂಡು ಹೊಲಿಗೆ ಯಂತ್ರದಲ್ಲೇ ಹೊಸ ಹೊಸ ಪ್ರಯೋಗಗಳನ್ನು ಮಾಡಲು ತೊಡಗಿದರು. 'ಕಷ್ಟಪಟ್ಟರೆ ಫಲವುಂಟು' ಎಂಬ ನಂಬಿಕೆ ಹುಸಿಯಾಗಲಿಲ್ಲ. ದಿನಗಳು ಉರುಳುತ್ತಾ ಹೋದಂತೆ ಬಣ್ಣಗಳಿಂದ ಮೂಡಿಸಿದ ಚಿತ್ರಗಳೇನೋ ಎಂದೆನಿಸುವ ಇವರ ವಿಶೇಷ ಎಂಬ್ರಾಯಿಡರಿಗಳು ದೇಶ ವಿದೇಶಗಳಲ್ಲೆಲ್ಲಾ ಮೆಚ್ಚುಗೆ ಗಳಿಸಿದವು.

ಅರುಣ್ ಕುಮಾರ್ ಅವರು ತಯಾರಿಸಿದ 6 ಫಿ 4 ಅಡಿಗಳಷ್ಟಿರುವ ಶ್ರೀಕೃಷ್ಣನ ಚಿತ್ರವು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ದಾಖಲಾಗಿದೆ. ಅಂದಾಜು 28,39,000 ಮೀಟರ್ ದಾರವನ್ನು ಬಳಸಿ ತಯಾರಿಸಿದ ಈ ಎಂಬ್ರಾಯಡರಿಯನ್ನು ಮಾಡಿ ಮುಗಿಸಲು ಮೂರು ವರ್ಷಗಳ ಸಮಯ ಬೇಕಾಯಿತಂತೆ. ಸಿಖ್ ಆಡಳಿತಗಾರನಾಗಿದ್ದ ಮಹಾರಾಜಾ ರಂಜಿತ್ ಸಿಂಗ್ ರವರ ಎಂಬ್ರಾಯಡರಿಯು 4x 2 ಅಡಿಗಳಷ್ಟು ದೊಡ್ಡದಿದೆ. ಅತ್ಯಂತ ಸೂಕ್ಷ್ಮ ವಿಚಾರಗಳನ್ನು ವಿವರವಾಗಿ ಬಿಂಬಿಸುವ ಈ ದಾರದ ಕಲಾಕೃತಿಯಲ್ಲಿ ಆಸ್ಥಾನಿಗರು ಹಾಗೂ ಸೈನಿಕರನ್ನೊಳಗೊಂಡಂತೆ ಸುಮಾರು 2000 ಮನುಷ್ಯ ಚಿತ್ರಗಳಿವೆ. ಗುರು ಗೋವಿಂದ್ ಸಿಂಗ್,ಮದರ್ ತೆರೇಸಾ, ಭಗತ್ ಸಿಂಗ್, ಏಸುಕ್ರಿಸ್ತ ಮುಂತಾದ ವ್ಯಕ್ತಿ ಚಿತ್ರಗಳಲ್ಲದೆ ಪ್ರಧಾನ ಮಂತ್ರಿ ಮೋದಿಯವರ ಚಿತ್ರವನ್ನೂ ದಾರದಿಂದ ರಚಿಸಿರುವ ಅರುಣ್ ಕುಮಾರ್ ರವರು ಸೂಜಿ ಮನುಷ್ಯ (ನೀಡ್ಲ್ ಮ್ಯಾನ್) ಎಂದೇ ಪ್ರಖ್ಯಾತಿಯಾಗಿದ್ದಾರೆ.

■ ವಿದ್ಯಾ ವಿ. ಹಾಲಭಾವಿ